**ಓ.ಎಸ್ ನಂ. 18/2022** **ಪಿ.ಡಬ್ಲ್ಯೂಃ 1**

**ದಿನಾಂಕಃ 04.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಶ್ರೀಮತಿ ಎ.ಎಸ್.ಎಂ. ವಕೀಲರಿಂದ

ನನ್ನ ತಾಯಿ ತೀರಿಕೊಂಡಾಗ ಅವರಿಗೆ ಸುಮಾರು 40 ವರ್ಷಗಳಾಗಿರಬಹುದು. ನನ್ನ ತಾಯಿಗೆ ಗರ್ಭಕೋಶದ ಗೆಡ್ಡೆಯಾಗಿತ್ತು, ಹೀಗಾಗಿ ಅವರು ಮರಣ ಹೊಂದಿರುತ್ತಾರೆ. ಗರ್ಭಕೋಶದ ಖಾಯಿಲೆಯಿಂದ ನನ್ನ ತಾಯಿ ಬಳಲುತ್ತಿದ್ದರು ಅದರಿಂದಲೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಗರ್ಭಕೋಶದ ಖಾಯಿಲೆ ಇದುದ್ದರಿಂದ ತುಂಬಾ ವರ್ಷಗಳ ಕಾಲ ಅದರಿಂದ ಅವರು ಬಳಲಿದ್ದು, ಅವರಿಗೆ ಹೊರಗಡೆ ಹೋಗಿ ದುಡಿಯಲು ಆಗುತ್ತಿರಲಿಲ್ಲ, ಹೀಗಾಗಿ ನನ್ನ ತಂದೆಯೇ ಹಣ ಕೊಟ್ಟು ದಾವಾ ಆಸ್ತಿಯನ್ನು ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಕೇವಲ ಒಂದು ವರ್ಷಗಳ ಕಾಲ ಮಾತ್ರ ಖಾಯಿಲೆಯಿಂದ ಬಳಲುತ್ತಿದ್ದರು ಎಂದು ನುಡಿಯುತ್ತಾರೆ. 1985-86ನೇ ಸಾಲಿನಲ್ಲಿ ನನ್ನ ತಂದೆಗೆ ಸೇರಿದ ಜಮೀನು ನಾಲೆಗೆ ಭೂಸ್ವಾಧೀನವಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾಲೆಗೆ ಜಮೀನು ಭೂಸ್ವಾಧೀನವಾಗಿದ್ದರ ಸಂಬಂಧ ನನ್ನ ತಂದೆಗೆ ಹಣ ಬಂದಿತ್ತು, ಅದನ್ನೇ ಕೊಟ್ಟು ನನ್ನ ತಂದೆ ದಾವಾ ಆಸಿತಯನ್ನು ನನ್ನ ತಾಯಿ ಹೆಸರಿಗೆ ನೊಂದಣಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆಯೊಂದಿಗೆ ಜಗಳ ಮಾಡಿಕೊಂಡು ಸುಮಾರು 20 ವರ್ಷಗಳಿಂದ ನಾನು ಪ್ರತ್ಯೇಕವಾಗಿ ವಾಸವಾಗಿದ್ದೇನೆ ಎಂದರೆ ಸಾಕ್ಷಿ ತಂದೆಯೊಾಂದಿಗೆ ಯಾವುದೇ ಜಗಳವಿಲ್ಲ, ಚಿಕ್ಕಮ್ಮ ತೊಂದರೆ ಕೊಟ್ಟಿದ್ದರಿಂದ ಪ್ರತ್ಯೇಕವಾಗಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ದಾವಾ ಆಸ್ತಿಯನ್ನು ನನ್ನ ಚಿಕ್ಕಮ್ಮನ ಹೆಸರಿಗೆ ಮಾಡಿದ್ದು, ಅದನ್ನು ನನ್ನ ಹೆಸರಿಗೆ ಮಾಡು ಎಂದು ನಾನು ದಿನಾಲೂ ನನ್ನ ತಂದೆಯೊಂದಿಗೆ ಜಗಳ ಮಾಡುತ್ತಿದ್ದೆ, ಈ ಜಗಳದಿಂದಲೇ ನಾನು

ಮನೆಯಿಂದ ಹೊರಗೆ ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಊರಿನಲ್ಲಿ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಹುಷಾರಿಲ್ಲದ್ದರಿಂದ ಒಂದು ಕಾಲನ್ನು ತೆಗೆದಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಕಾಲು ತೆಗೆದಿದ್ದರಿಂದ ಅವರನ್ನು ಅವರ ಆರೈಕೆಯನ್ನು ಪ್ರತಿವಾದಿ ಮತ್ತು ಅವರ ಮಕ್ಕಳೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಬಡ್ಡಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನ ತಂದೆ ಬೇರೆಯವರ ಚೆಕ್ ಗಳನ್ನು ಮನೆಯಲ್ಲಿ ಇಟ್ಟುಕೊಂಡಿದ್ದರು, ನನ್ನ ತಂದೆ ತೀರಿಕೊಂಡ ನಂತರ ನಾನು ಪ್ರತಿವಾದಿಯೊಂದಿಗೆ ಜಗಳ ಮಾಡಿ ಅವರನ್ನು ಹೊಡೆದು ಮನೆಯಲ್ಲಿದ್ದ ಚೆಕ್ ಗಳನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಉತ್ತರ ಜೀವಿತ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ತಹಸೀಲ್ದಾರರಿಂದ ವಂಶವೃಕ್ಷ ಪ್ರಮಾಣ ಪತ್ರವನ್ನು ಪಡೆದು ಹಾಜರುಪಡಿಸಿಲ್ಲ.

ನನ್ನ ತಾಯಿ ಖರೀದಿ ಮಾಡಿರುವ ಆಸ್ತಿಗಳ ಕ್ರಯಪತ್ರಗಳ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಐಟಂ ನಂ.1ನೇ ಆಸ್ತಿ ಮೂಲತಹ ಪ್ರಸನ್ನಾಚಾರ್ ರವರ ಹೆಸರಿನಲ್ಲಿತ್ತು. ನನ್ನ ತಾಯಿ 4 ಎಕರೆ ಆಸ್ತಿಯನ್ನು 8 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೆ. ದಾವಾ ಶೆಡ್ಯೂಲ್ ಐಟಂ ನಂ.2ನೇ ಆಸ್ತಿ ಮೂಲತಹ ಅನ್ವರ್ ಪಾಷ ರವರಿಗೆ ಸೇರಿದ್ದು, ಅದನ್ನು ನನ್ನ ತಾಯಿ 4 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೆ. ಕ್ರಯಪತ್ರಗಳಲ್ಲಿ ಕ್ರಯದ ಮೊಬಲಗನ್ನು ಯಾವ ರೀತಿ ಕೊಟ್ಟಿರುತ್ತಾರೆ ಎನ್ನುವ ಬಗ್ಗೆ ವಕ್ಕಣಿಕೆ ಇದ್ದು, ಅದನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಆಗ ನಾವು ಚಿಕ್ಕವರು ಹೀಗಾಗಿ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ.3 ಮತ್ತು 4ರಲ್ಲಿ ಕ್ರಯದ ಮೊಬಲಗನ್ನು ಅಡ್ವಾನ್ಸ್ ಆಗಿ ಮುಂಚೆಯೇ ಸಂದಾಯ

ಮಾಡಲಾಗಿದೆ ಎಂದು ಉಲ್ಲೇಖ ಇದೆ ಎಂದರೆ, ಇರಬಹುದು. ನನ್ನ ತಂದೆಯಿಂದ ಮುಂಚೆಯೇ ಅನ್ವರ್ ಪಾಷ ಮತ್ತು ಪ್ರಸನ್ನಾಚಾರ್ ರವರುಗಳು ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು ಅದಕ್ಕಾಗಿಯೇ ನಿಪಿ.3 ಮತ್ತು 4 ಕ್ರಯ ಪತ್ರಗಳನ್ನು ನನ್ನ ತಂದೆಯ ಹೇಳಿಕೆಯ ಮೇರೆಗೆ ಸದರಿಯವರುಗಳು ನನ್ನ ತಾಯಿ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈಗ ನಾನು ನೋಡುತ್ತಿರುವ ಪೋಟೋಗಳು ದಾವಾ ಆಸ್ತಿಗೆ ಸಂಬಂಧಪಟ್ಟ ಪೋಟೊಗಳು ಎಂದರೆ ಸರಿ. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಅಭಿಮುಖವಾಗಿ ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು. ನಿಡಿ.1 ಮತ್ತು 2 ರಲ್ಲಿ ಬೆಳೆ ಬೆಳೆದ ಬಗ್ಗೆ ಕಾಣುವುದಿಲ್ಲ ಎಂದರೆ ಸಾಕ್ಷಿ  ನಾನೇ ಅನುಭೋಗದಲ್ಲದೇನೆ, ಬೆಳೆ ಬೆಳೆದಿರುವ ಬಗ್ಗೆ ಸಾಕ್ಷಿ ಕೊಡುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ಬೆಳೆ ಬೆಳೆದಿಲ್ಲ, ಸ್ವಾಧೀನದಲ್ಲಿಯೂ ಇಲ್ಲ, ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖರೀದಿ ಪತ್ರಗಳಿಗೆ ಸಾಕ್ಷಿ ಎಂದು ಯಾರು ಸಹಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.3 ಮತ್ತು 4 ರಲ್ಲಿ ಇರುವಂತಹ ಸಾಕ್ಷಿದಾರರು ನನ್ನ ತಂದೆಯ ಜೊತೆಗೆ ಲೇವಾದೇವಿ ಮಾಡುತ್ತಿದ್ದ ವ್ಯಕ್ತಿಗಳಾಗಿದ್ದು, ನನ್ನ ತಾಯಿ ಪರವಾಗಿ ಯಾರೂ ಸಹಾ ಸಾಕ್ಷಿ ಹಾಕಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆಯ ಆಸ್ತಿಯಾಗಿದ್ದು, ಒಪ್ಪಿಗೆಯ ಮೇರೆಗೆ ನನ್ನ ತಂದೆ ದಾವಾ ಆಸ್ತಿಯ ಖಾತೆಯನ್ನು ಪ್ರತಿವಾದಿಗೆ ಮಾಡುವ ಸಲುವಾ ನಿಪಿ.11 ದಾಖಲಾತಿಯನ್ನು ಮಾಡಿದ್ದು, ಅದಕ್ಕೆ ನಾವು ಸಹಾ ಸಹಿ ಹಾಕಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆ ಸವಯಕ್ಕೆ 5-6 ನೇ ತರಗತಿಯಲ್ಲಿ ಓದುತ್ತಿದ್ದೆನು, ಹೀಗಾಗಿ ಸಹಿ ಹಾಕುವ ಪ್ರಶ್ನೆಯೇ ಬರುವುದಿಲ್ಲಎಂದು ನುಡಿಯುತ್ತಾರೆ. ಪ್ರತಿವಾದಿಯ ಹೆಸರಿಗೆ ಖಾತೆ ಯಾವ ವರ್ಷದಲ್ಲಿ ಆಗಿದೆ ಎಂದರೆ ಸಾಕ್ಷಿ

1994-95ನೇ ಇಸವಿಯಲ್ಲಿ ಆಗಿದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಖರೀದಿಯನ್ನು 1986ನೇ ಇಸವಿಯಲ್ಲಿ ಮಾಡಿದ್ದು, ನನ್ನ ತಾಯಿ 1987 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಗರ್ಭಕೋಶದ ಖಾಯಿಲೆಯಿಂದ ಬಳಲುತ್ತಿದ್ದರಿಂದ ಅವರಿಗೆ ದುಡಿಯುವ ಶಕ್ತಿಯೇ ಇರಲಿಲ್ಲ, ಆದಾಗ್ಯೂ ಸಹಾ ನನ್ನ ತಾಯಿಯೇ ದುಡಿದು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅವರ ತವರು ಮನೆಯ ಕಡೆಯವರು ಸ್ತ್ರೀಧನವಾಗಿ ಹಣ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ತವರು ಮನೆಯ ಕಡೆಯವರಿಗೆ ಹಣ ಸಹಾಯ ಮಾಡುವಷ್ಟು ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಯಾವುದೇ ಅಸ್ತಿಯನ್ನು ಕೊಂಡಿಲ್ಲ, ನಾನು ಸ್ವಾಧೀನದಲ್ಲಿಯೂ ಸಹಾ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆ ಆಸ್ತಿಯಾಗಿದ್ದು, ಅದನ್ನು ನನ್ನ ತಂದೆ ಪ್ರತಿವಾದಿಯ ಹೆಸರಿಗೆ ಮಾಡಿಕೊಟ್ಟ ವಿಷಯ ನನಗೆ ಗೊತ್ತಿದ್ದರೂ ಸಹಾ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.